**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ್ಯಾದಂಗಳವರ ನ್ಯಾಯಾಲಯ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ**

# ಓ ಎಸ್ ನಂ. 19/2012

ಡಿ ಡಬ್ಲ್ಯೂ: 10

ದಿನಾಂಕ 26-08-2019 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು

ಮುಖ್ಯ ವಿಚಾರಣೆ: ೮ನೇ ಪ್ರತಿವಾದಿ ಪರ: ಶ್ರೀ ಹೆಚ್ ಎನ್ ಎಸ್ ವಕೀಲರಿಂದ:

ನಾನು ದಾವೆಯಲ್ಲಿ ೮ನೇ ಪ್ರತಿವಾದಿ ಇರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಹೇಳಿಕೆ ಸಾಕ್ಷ್ಯ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ವಿಷಯವೆಲ್ಲಾ ಸತ್ಯವಾಗಿರುತ್ತದೆ. ಅದನ್ನು ಓದಿ ನೋಡಿ ಸಹಿ ಮಾಡಿರುತ್ತೇನೆ. ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಗುರುತಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಕ್ರಯಪತ್ರವನ್ನು ನಿಡಿ-108, ಆರ್ ಟಿ ಸಿಯನ್ನು ನಿಡಿ-109, ಮ್ಯುಟೇಷನ್ ನಿಡಿ-110, ಆಸ್ತಿಯನ್ನು ಖರೀದಿಸಲು ನಮ್ಮ ಇಲಾಖೆಯಿಂದ ಪಡೆದುಕೊಂಡಿರುವ ಅನುಮತಿ ಪತ್ರವನ್ನು ನಿಡಿ-111, ಭವಿಷ್ಯ ನಿಧಿಯಿಂದ ನಾನು ಪಡೆದಿರುವ ಸಾಲದ ಬಗ್ಗೆ ದಾಖಲೆ ನಿಡಿ-112, ವೇತನ ಪ್ರಮಾಣ ಪತ್ರವನ್ನು ನಿಡಿ-113, ನಾನು ಆಸ್ತಿಯನ್ನು ಖರೀದಿಸಿದ ನಂತರ ಅನುಮತಿ ಕೋರಿ ನಮ್ಮ ಇಲಾಖೆಗೆ ಸಲ್ಲಿಸಿದ ಪತ್ರವನ್ನು ನಿಡಿ-114, ದಿನಾಂಕ 16/10/2009ರ ಕ್ರಯಪತ್ರವನ್ನು ನಿಡಿ-115, ರಶೀದಿಯನ್ನು ನಿಡಿ-116, ಅಸೆಸ್ಮೆಂಟ್ ಎಕ್ಸಟ್ರಾಕ್ಟನ್ನು ನಿಡಿ-117, ನಾನು ಬ್ಯಾಂಕಿನಿಂದ ಸಾಲ ಪಡೆದಿರುವ

ಬಗ್ಗೆ ಲೆಕ್ಕ ತಃಖ್ತೆಯನ್ನು ನಿಡಿ-118, ಸಾಲ ತೀರುವಳಿ ಪತ್ರವನ್ನು ನಿಡಿ-119, ಸ್ಥಿರಾಸ್ತಿಗಳ ವಿವರಣೆ ತೋರಿಸುವ 4 ದಾಖಲೆಗಳನ್ನು ಕ್ರಮವಾಗಿ ನಿಡಿ-120 ರಿಂದ 123, ನಾನು ಚಿನ್ನದ ಆಭರಣಗಳನ್ನು ಆಧಾರ ಮಾಡಿ ಸಾಲ ಪಡೆದಿರುವ ಬಗ್ಗೆ ದಾಖಲೆಯನ್ನು ನಿಡಿ-124 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ವಾದಿ ಪರಃ ಶ್ರೀ ಕೆ ಎನ್ ಆರ್ ವಕೀಲರಿಂದಃ</u>

ಜಿಲ್ಲಾ ನ್ಯಾಯಾಲಯದಿಂದ ಪ್ರಕರಣವನ್ನು ಪುನಃ ಈ ನ್ಯಾಯಾಲಯಕ್ಕೆ ಕಳುಹಿಸಿದ ನಂತರ ನಾನು ಲಿಖಿತ ಹೇಳಿಕೆ ಸಲ್ಲಿಸಿದ್ದೇನೆ ಎಂದರೆ ನಿಜ. ಅದರಲ್ಲಿ ದಾವಾ ಐಟಂ ನಂ.51 ಮತ್ತು 56 ರನ್ನು ಹೊರತು ಪಡಿಸಿ ಉಳಿದೆಲ್ಲಾ ಆಸ್ತಿ ವಾದಿ ಮತ್ತು 1 ರಿಂದ 10 ನೇ ಪ್ರತಿವಾದಿಯವರು ಒಟ್ಟು ಕುಟುಂಬದ ಆಸ್ತಿ ಎಂದು ಹೇಳಿದ್ದೇನೆ ಎಂದರೆ ನಿಜ. ಪ್ರಕರಣವನ್ನು ರಿಮ್ಯಾಂಡ್ ಮಾಡಲು ಮೊದಲು ಸಹ ಲಿಖಿತ ಹೇಳಿಕೆ ಸಲ್ಲಿಸಿದ್ದೇನೆ ಎಂದರೆ ನಿಜ. ನಿವೇಶನವನ್ನು 2 ರಿಂದ 5 ನೇ ಪ್ರತಿವಾದಿಗಳಿಂದ ಖರೀದಿಸಿದ್ದೇನೆ. ಅವರು ಹೇಮಾವತಿ ಎಂಬುವರಿಂದ ನಿವೇಶನವನ್ನು ಖರೀದಿಸಿದ್ದಾರೆ.

ಗಂಗಾಧರಪ್ಪನವರ ನಿವೇಶನವನ್ನು ಖರೀದಿಸಲು ಹಣವನ್ನು ಎಲ್ಲಿಂದ ತಂದಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಎರಡೂ ಆಸ್ತಿಗಳನ್ನು ಖರೀದಿಸಲು ಬ್ಯಾಂಕಿನಿಂದ ಯಾವುದೇ ಸಾಲ ಪಡೆದಿಲ್ಲ ಎಂದರೆ ಸರಿಯಲ್ಲ. ನಮ್ಮ ಇಲಾಖೆಯವರೊಡನೆ ಸೇರಿ ಆಸ್ತಿಯನ್ನು ಖರೀದಿಸುವ ಸಲುವಾಗಿ ದಾಖಲೆಗಳನ್ನು ಸೃಷ್ಟಿಸಿದ್ದೇನೆ ಎಂದರೆ

ಸರಿಯಲ್ಲ. ದಾವಾ ಐಟಂ ನಂ.51 ಮತ್ತು 56ರ ಆಸ್ತಿಗಳು ನನ್ನ ಸ್ವಯಾರ್ಜಿತ ಆಸ್ತಿಗಳಲ್ಲ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಸೀನಿಯರ್ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.
ಕಡೂರು.